


ಹೊಸ ಚಿಗುರು: ಭಾರತದ ಬ್ಯಾಟಿಂಗ್ ಭರವಸೆ ಶುಭಮನ್ ಗಿಲ್

## ರೋಹಿತ್ ನಾಯಕತ್ವಕ್ಕೆ ಪರೀಕ್ಷೆ

ಭಾರತ ಏಕದಿನ ತಂಡದ ಚುಕ್ಕಾಣಿ ಹಿಡಿದಿರುವ ರೋಹಿತ್ ನಾಯಕತ್ವದ ಅಗ್ನಿಪರೀಕ್ಷೆಗೂ ವಿಶ್ವಕಪ್ ವೇದಿಕೆಯಾಗಲಿದೆ. 2007ರಲ್ಲಿ ಐರ್ಲೆಂಡ್ ವಿರುದ್ಧ ಆಡುವ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಅವರಿಗೆ ಬರೋಬ್ಬರಿ ಒಂದು ದಶಕವಾಗುವಷ್ಟರಲ್ಲಿ ಭಾರತ ತಂಡವನ್ನು ಮುನ್ನಡೆಸುವ ಅವಕಾಶ ಲಭಿಸಿತು. 2017ರಲ್ಲಿ ಭಾರತ, ಶ್ರೀಲಂಕಾ, ಬಾಂಗ್ಲಾದೇಶ ನಿದಹಾಸ್ ಟ್ರೋಫಿಯಲ್ಲಿ ರೋಹಿತ್ ನಾಯಕತ್ವದಲ್ಲಿ ತಂಡ ಚಾಂಪಿಯನ್ ಆಯಿತು.

ವಿರಾಟ್ ಕೊಹ್ಲಿ ಅನುಪಸ್ಥಿತಿಯಲ್ಲಿ 2018ರಲ್ಲಿ ಏಷ್ಯಾ ಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ಮುನ್ನಡೆಸುವ ಅವಕಾಶ ಲಭಿಸಿತು. ಆಗಲೂ ಭಾರತ ಚಾಂಪಿಯನ್ ಆಯಿತು. ಈ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಬಳಿಕ ಭಾರತ ಮುಂದಿನ ಐದು ವರ್ಷಗಳಿಂದ ದ್ವಿಪಕ್ಷೀಯ ಸರಣಿಗಳ ಪ್ರಾಬಲ್ಯದ ಹೊರತಾಗಿ ಐಸಿಸಿ, ಏಷ್ಯಾಕಪ್‌ನಂಥ ಎರಡಕ್ಕಿಂತಲೂ ಹೆಚ್ಚು ತಂಡಗಳು ಆಡುವ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿರಲಿಲ್ಲ. ಐದು ವರ್ಷಗಳಿಂದ ಅನುಭವಿಸಿದ್ದ ಪ್ರಶಸ್ತಿಯ ಬರ ಇತ್ತೀಚೆಗೆ ಶ್ರೀಲಂಕಾದಲ್ಲಿ ರೋಹಿತ್ ನಾಯಕತ್ವದಲ್ಲಿಯೇ ನೀಗಿತು.

ಬಲಗೈ ಬ್ಯಾಟ್ಸ್‌ಮನ್ ರೋಹಿತ್ ಏಕದಿನ ಕ್ರಿಕೆಟ್‌ನಲ್ಲಿ ನಾಯಕರಾಗಿ ಆಡಿರುವ 33 ಪಂದ್ಯಗಳಲ್ಲಿ ಭಾರತ 24ರಲ್ಲಿ ಗೆದ್ದು, ಎಂಟರಲ್ಲಿ ಸೋತಿದೆ. ಒಂದು ಪಂದ್ಯದಲ್ಲಿ ಫಲಿತಾಂಶ ಬಂದಿಲ್ಲ. ಅವರು ವಿಶ್ವಕಪ್ ತಂಡಕ್ಕೆ ನಾಯಕರಾಗಿರುವುದು ಇದೇ ಮೊದಲ ಬಾರಿ. 2019ರ ವಿಶ್ವಕಪ್‌ನಲ್ಲಿ ವಿರಾಟ್ ಕೊಹ್ಲಿ ತಂಡವನ್ನು ಮುನ್ನಡೆಸಿದ್ದಾಗ ವಿಕೆಟ್ ಕೀಪರ್ ಜೊತೆಗೆ ಮಹೇಂದ್ರ ಸಿಂಗ್ ಧೋನಿ ಆಟಗಾರರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಧೋನಿ ಈಗಾಗಲೇ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದಾರೆ. ವಿಕೆಟ್ ಕೀಪರ್ ಜವಾಬ್ದಾರಿ ಕೆ.ಎಲ್. ರಾಹುಲ್ ಹಾಗೂ ಇಶಾನ್ ಕಿಶನ್ ಮೇಲಿದೆ. ವಿಶ್ವಕಪ್ ವೇದಿಕೆಯಲ್ಲಿ ಒತ್ತಡವನ್ನು ನಿರ್ವಹಿಸುವ ಮತ್ತು ತಂಡವನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸುವ ಸವಾಲು ಮತ್ತು ಅವಕಾಶ ಈಗ ರೋಹಿತ್ ಶರ್ಮಾ ಮುಂದಿದೆ.

## ಬಹುಮಾನ ಮೊತ್ತದಲ್ಲಿ ಭಾರೀ ಏರಿಕೆ

ಕ್ರಿಕೆಟ್ ವಿಶ್ವಕಪ್ ಇತಿಹಾಸದಲ್ಲಿ ಸಾವಿರ ಲೆಕ್ಕದಲ್ಲಿ ಬಹುಮಾನ ಪಡೆದ ತಂಡಗಳು ಈಗ ಕೋಟಿ ಕೋಟಿ ಸಂಪಾದಿಸುತ್ತಿವೆ. ಪ್ರತಿ ಟೂರ್ನಿಯಿಂದ ಟೂರ್ನಿಗೆ ಖರ್ಚು ಮಾಡುವ ಹಣವೂ ಹೆಚ್ಚಾಗುತ್ತಿದೆ. ವಿಶ್ವಕಪ್‌ನಲ್ಲಿ 1975ರಲ್ಲಿ ಮೊದಲ ಬಾರಿಗೆ ಚಾಂಪಿಯನ್ ತಂಡಕ್ಕೆ ₹76 ಸಾವಿರ ನೀಡಲಾಗಿತ್ತು. ಅದಕ್ಕೂ ಮೊದಲು ಟ್ರೋಫಿ ಮಾತ್ರ ಕೊಡಲಾಗುತ್ತಿತ್ತು.

ಭಾರತ 1983ರಲ್ಲಿ ಮೊದಲ ಬಾರಿಗೆ ವಿಶ್ವಕಪ್ ಗೆದ್ದಾಗ ಪಂದ್ಯಗಳನ್ನಾಡಿದ ತಂಡಗಳಿಗೆ ಮತ್ತು ಪ್ರಶಸ್ತಿ ಗೆದ್ದ ತಂಡಗಳಿಗೆ ಬಹುಮಾನ ಮೊತ್ತ ನೀಡಲು ಸಂಘಟಕರು ಒಟ್ಟು ₹11.25 ಲಕ್ಷ ಖರ್ಚು ಮಾಡಿದ್ದರು. ವಿಜೇತ ತಂಡಕ್ಕೆ ₹3.40 ಲಕ್ಷ ಲಭಿಸಿತ್ತು. 2003ರಲ್ಲಿ ಬಹುಮಾನದ ಮೊತ್ತಕ್ಕಾಗಿ ಖರ್ಚಾಗಿದ್ದು ₹24 ಕೋಟಿಯಾದರೆ, ಚಾಂಪಿಯನ್ ಪಡೆ ಪಡೆದುಕೊಂಡಿದ್ದು ₹9.48 ಕೋಟಿ ಬಹುಮಾನ. ಮಹೇಂದ್ರ ಸಿಂಗ್ ಧೋನಿ ನಾಯಕತ್ವದಲ್ಲಿ ಭಾರತ 2011ರಲ್ಲಿ ಟ್ರೋಫಿ ಎತ್ತಿ ಹಿಡಿದಾಗ ₹15.58 ಕೋಟಿ



### ಭಾರತದ ಕ್ರೀಡಾ ಸಂಘಟನೆ ಶಕ್ತಿಗೆ ಸವಾಲು

ಭಾರತ ತಂಡ ತವರಿನಲ್ಲಿ ವಿಶ್ವಕಪ್ ಗೆಲ್ಲುವ ಜೊತೆಗೆ ದೇಶದ ಕ್ರೀಡಾ ಆಡಳಿತದ ಶಕ್ತಿಯನ್ನು ಜಗತ್ತಿನೆದುರು ತೆರೆದಿಡಲು ಈ ಟೂರ್ನಿ ಅತ್ಯುತ್ತಮ ಅವಕಾಶವಾಗಿದೆ.

ಭಾರತ ಪುರುಷರ ತಂಡ ಐಸಿಸಿಯ ಪ್ರತಿಷ್ಠಿತ ಈ ಟೂರ್ನಿಗೆ 1987ರಲ್ಲಿ ಪಾಕಿಸ್ತಾನದ ಜೊತೆ, 1996ರಲ್ಲಿ ಪಾಕಿಸ್ತಾನ–ಶ್ರೀಲಂಕಾ ಜೊತೆ ಮತ್ತು 2011ರಲ್ಲಿ ಬಾಂಗ್ಲಾದೇಶ, ಶ್ರೀಲಂಕಾ ಜೊತೆ ಜಂಟಿಯಾಗಿ ಆತಿಥ್ಯ ವಹಿಸಿಕೊಂಡಿತ್ತು. ಇದೇ ಮೊದಲ ಸಲ ಭಾರತ ಸ್ವತಂತ್ರವಾಗಿ ಆತಿಥ್ಯದ ಅವಕಾಶ ಪಡೆದಿದೆ. ನವೆಂಬರ್ 19ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಫೈನಲ್ ನಡೆಯಲಿದೆ.

ವಿಶ್ವಕಪ್ ಕ್ರಿಕೆಟ್ ಮಾತ್ರವಲ್ಲದೆ, ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್, ಐಬಿಎಸ್‌ಎಫ್ ವಿಶ್ವ ಸ್ನೂಕರ್, ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್, ವಿಶ್ವಕಪ್ ಹಾಕಿ, ಮಹಿಳಾ ಕ್ರಿಕೆಟ್ ವಿಶ್ವಕಪ್, ವಿಶ್ವ ಚೆಸ್, ವಿಶ್ವ ಹಾಕಿ ಲೀಗ್, ಕಾಮನ್‌ವೆಲ್ತ್ ಕ್ರೀಡಾಕೂಟ ಹೀಗೆ ಅನೇಕ ಟೂರ್ನಿಗಳನ್ನು ಭಾರತ ಯಶಸ್ವಿಯಾಗಿ ಸಂಘಟಿಸಿದೆ. 'ಇಂಡಿಯನ್ ಪ್ರೀಮಿಯರ್ ಲೀಗ್' (ಐಪಿಎಲ್) ಟೂರ್ನಿಯನ್ನು 2008ರಿಂದ ನಡೆಸುವ ಮೂಲಕ ಜಗತ್ತಿನ ಖ್ಯಾತನಾಮ ಆಟಗಾರರು ಅದರಲ್ಲಿ ಪಾಲ್ಗೊಳ್ಳುವಂತೆ ಭಾರತ ಮಾಡಿದೆ. ಆದರೆ, ಏಕದಿನ ಪುರುಷರ ವಿಶ್ವಕಪ್ ಕ್ರಿಕೆಟ್ ಮೊದಲ ಬಾರಿಗೆ ಸ್ವತಂತ್ರವಾಗಿ ಸಂಘಟಿಸುವ ಅವಕಾಶ ಲಭಿಸಿದೆ. ಇದು ಭಾರತ ತಂಡಕ್ಕೆ ಹಾಗೂ ಜಗತ್ತಿನ ಶ್ರೀಮಂತ ಕ್ರಿಕೆಟ್ ಮಂಡಳಿ ಎಂದು ಹೆಸರಾದ ಬಿಸಿಸಿಐಗೆ ಪ್ರತಿಷ್ಠೆಯೂ ಆಗಿದೆ.